International Journal of Kannada Research 2023; 9(3): 01-04

International Journal of Kannada Research
www.kannadajournal.com

ISSN: 2454–5813
IJKR 2023; 9(3): 01-04
© 2023 IJKR
www.kannadajournal.com
Received: 01-05-2023
Accepted: 05-06-2023

**ಶರ್ಲಿ ಸ್ನೇಹಲತಾ ಜತ್ತನ್ನ**
ಪಿಎಚ್.ಡಿ.
ಸಂಶೋಧನಾರ್ಥಿ, ಅಭಿವೃದ್ಧಿ ಅಧ್ಯಯನ, ಡಾ.
ಹಾ.ಮಾ.ನಾ. ಸಂಶೋಧನಾ ಕೇಂದ್ರ (ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರ),
ಕರ್ನಾಟಕ, ಭಾರತ

Corresponding Author:
**ಶರ್ಲಿ ಸ್ನೇಹಲತಾ ಜತ್ತನ್ನ**
ಪಿಎಚ್.ಡಿ.
ಸಂಶೋಧನಾರ್ಥಿ, ಅಭಿವೃದ್ಧಿ ಅಧ್ಯಯನ, ಡಾ.
ಹಾ.ಮಾ.ನಾ. ಸಂಶೋಧನಾ ಕೇಂದ್ರ (ಹಂಪಿ ಕನ್ನಡ ವಿಶ್ವವಿದ್ಯಾಲಯದ ಮಾನ್ಯತಾ ಕೇಂದ್ರ),
ಕರ್ನಾಟಕ, ಭಾರತ

# ವಲಸೆ ಮತ್ತು ಮಹಿಳೆ: ಸ್ತ್ರೀಕೇಂದ್ರಿತ ಪರ್ಯಾಯ ಚಿಂತನೆಗಳು

## ಶರ್ಲಿ ಸ್ನೇಹಲತಾ ಜತ್ತನ್ನ

**ಪೀಠಿಕೆ**

ಇತ್ತೀಚೆಗೆ "ಮಾತೃಭೂಮಿ" ಎಂಬ ಕೇರಳಮೂಲದ ಹೆಸರಾಂತ ಪತ್ರಿಕೆಯಲ್ಲಿ "ನರಸಿಂಹರಾಜಪುರ: ಕರ್ನಾಟಕದಲ್ಲಿ ಒಂದು ಮಿನಿ ಕೇರಳ" ಎಂಬ ಲೇಖನವೊಂದು ಪ್ರಕಟವಾಯಿತು (ಮಾತೃಭೂಮಿ ೨೦೨೨, ನವೆಂಬರ್ ೧). ಬಿಜು ಪಂಕಜ್ ಎಂಬ ಪತ್ರಿಕಾ ವರದಿಗಾರ ಈ ಲೇಖನದ ಕರ್ತೃ. ಇದರ ಬೆನ್ನಲ್ಲೇ ಮಾತೃಭೂಮಿ ನ್ಯೂಸ್ ಚಾನಲ್ ಇದೇ ಲೇಖನದ ಸಾಕ್ಷ್ಯಚಿತ್ರ ಸ್ವರೂಪವೊಂದನ್ನೂ ಹೊರಡಿಸಿತು (ಮಾತೃಭೂಮಿ ನ್ಯೂಸ್ ೨೦೨೨). ಕೇರಳದಿಂದ ಕರ್ನಾಟಕದ ನರಸಿಂಹರಾಜಪುರಕ್ಕೆ ವಲಸೆ ಬಂದ ಮಲಯಾಳಿಗಳ ಬದುಕಿನ ಸುತ್ತ ಹೆಣೆಯಲ್ಪಟ್ಟ ಬರಹ ಮತ್ತು ಸಾಕ್ಷ್ಯಚಿತ್ರಗಳಿವು. ೧೯೩೦ರಿಂದ ಆರಂಭಗೊಂಡು ಇಂದಿಗೂ ಚಿಕ್ಕಮಗಳೂರಿನ ನರಸಿಂಹರಾಜಪುರದತ್ತ ನಡೆಯುತ್ತಿರುವ ಕೇರಳಿಗರ ವಲಸೆಯ ವೃತ್ತಾಂತವನ್ನು ಕಟ್ಟಿಡುವ ಪ್ರಯತ್ನವನ್ನು ಇವು ಮಾಡುತ್ತವೆ. ವಲಸಿಗರ ಬದುಕಿನ ಆರಂಭಿಕ ಹೋರಾಟದ ಹೆಜ್ಜೆಗಳು, ವಲಸೆಯ ವಿವಿಧ ಕಾರಣಗಳು, ವಲಸಿತರ ಸಾಹಸದ ಬದುಕು ಮತ್ತವರ ಸಾಧನೆಗಳನ್ನು ವಲಸಿತರ ಯಶೋಗಾಥೆಯಾಗಿ ಚಿತ್ರಿಸುವ ಕೆಲಸವನ್ನು ಇವು ಮಾಡಿವೆ. ಸುಮಾರು ಒಂದು ಶತಮಾನಗಳ ಇತಿಹಾಸವಿರುವ ಈ ವಲಸಿಗರ ಬದುಕಿನ ಕುರಿತು ಇದುವರೆಗೆ ಯಾವುದೇ ದಾಖಲೀಕರಣವಾಗಲೀ, ಸಂಶೋಧನೆಗಳಾಗಲೀ ನಡೆಯದೇ ಇರುವ ಹಿನ್ನೆಲೆಯಲ್ಲಿ ಈ ಲೇಖನ ಮತ್ತು ಸಾಕ್ಷ್ಯಚಿತ್ರಗಳ ಕೊಡುಗೆಯನ್ನು ಮೆಚ್ಚಲೇಬೇಕು. ಆದರೆ ಈ ವಲಸೆಯ ವೃತ್ತಾಂತ ಸಂಪೂರ್ಣವಾಗಿ ಒಂದು ಪುರುಷಕೇಂದ್ರಿತ ಕಥನವಾಗಿ ರಚಿತವಾಗಿದ್ದು ಮಹಿಳೆಯರ ಧ್ವನಿ ಮತ್ತು ಅನುಭವಗಳನ್ನು ಪೂರ್ತಿಯಾಗಿ ತಿರಸ್ಕರಿಸಿರುವುದು ಮಾತ್ರವಲ್ಲದೆ, ಮಹಿಳೆಯನ್ನು ವಲಸೆಯ ಚರಿತ್ರೆಯಿಂದ ಸಂಪೂರ್ಣವಾಗಿ ಹೊರಗಿರಿಸುತ್ತದೆ. ಇಂತಹ ಪುರುಷಕೇಂದ್ರಿತ ವಲಸೆಯ ಕಥನಗಳನ್ನು ಪ್ರಶ್ನಿಸುವುದು ಹಾಗೂ ವಲಸೆಯ ಕಥನಗಳನ್ನು ಸ್ತ್ರೀಯರ ಅನುಭವಗಳ ಹಿನ್ನೆಲೆಯಲ್ಲಿ ಮರುಅವಲೋಕಿಸುವುದು ಇಂದಿನ ಅನಿವಾರ್ಯ. ಈ ದಿಶೆಯಲ್ಲಿ ಒಂದು ಸ್ತ್ರೀವಾದೀ ಚಿಂತನೆಯ ಸಾಧ್ಯತೆ ಮತ್ತು ಅಗತ್ಯತೆಗಳನ್ನು ಚರ್ಚಿಸುವುದು ಪ್ರಸ್ತುತ ಲೇಖನದ ಉದ್ದೇಶ. ೧೯೩೦ರ ದಶಕದಲ್ಲಿ ಕೇರಳದಿಂದ ನರಸಿಂಹರಾಜಪುರಕ್ಕೆ ಬಂದ ಮೊದಲನೇ ವಲಸಿತ ವ್ಯಕ್ತಿಯಿಂದ ಹಿಡಿದು ಇತ್ತೀಚಿನ ದಿನಗಳವರೆಗೆ ವಲಸೆ ಬಂದ ಅನೇಕ ಪುರುಷರನ್ನು ಸಂದರ್ಶಿಸಿ ಅವರ ಅನುಭವಗಳನ್ನು ಕಲೆಹಾಕುವ ಯತ್ನ ಮೇಲ್ಕಾಣಿಸಿದ ಲೇಖನ ಮತ್ತು ಸಾಕ್ಷ್ಯಚಿತ್ರಗಳಲ್ಲಿ ನಡೆದಿದೆ. ಆದರೆ ಒಬ್ಬ ಮಹಿಳೆಯನ್ನು ಕೂಡಾ ಸಂದರ್ಶಿಸುವ ಮತ್ತು ಆಕೆಯ ಧ್ವನಿಯನ್ನು ವಲಸೆಯ ಅನುಭವಗಳ ಭಾಗವಾಗಿಸುವ ಪ್ರಯತ್ನ ಇಲ್ಲಿ ನಡೆಯದಿರುವುದು ವಿಪರ್ಯಾಸಕರ. ಆದರೆ ಇದೊಂದು ಪ್ರತ್ಯೇಕ ಉದಾಹರಣೆಯಲ್ಲ. ವಲಸೆಯ ಹಲವು ಕಥನಗಳಲ್ಲಿ ಮಹಿಳೆಯ ಪಾತ್ರ, ಧ್ವನಿ, ಮತ್ತು ಅನುಭವಗಳನ್ನು ಸಂಪೂರ್ಣವಾಗಿ ನಗಣ್ಯವಾಗಿಸಿರುವುದು ಕಂಡುಬರುತ್ತದೆ. ಇದು ವಲಸೆಗೆ ಸಂಬಂಧಿಸಿದ ಅಧ್ಯಯನಗಳಿಗೆ ಒಂದು ಹೊಸ ಆಯಾಮ ಮತ್ತು ದೃಷ್ಟಿಕೋನದ ಅನಿವಾರ್ಯತೆಯನ್ನು ಎತ್ತಿ ಹಿಡಿಯುತ್ತದೆ. ಈ ಲೇಖನ ಅಂತಹ ಒಂದು ಅನಿವಾರ್ಯತೆಯತ್ತ ಬೆಳಕು ಚೆಲ್ಲುತ್ತದೆ. ಮೇಲ್ಕಾಣಿಸಿದ ವಲಸೆಯ ಪ್ರಭಾವಶಾಲೀ ಕಥನಗಳನ್ನು ಸ್ತ್ರೀಕೇಂದ್ರಿತ ದೃಷ್ಟಿಕೋನದ ಮೂಲಕ ವಿಮರ್ಶಿಸುವ ಅಗತ್ಯ ಮತ್ತು ಅನಿವಾರ್ಯತೆಯ ಕುರಿತು ಇಲ್ಲಿ ಚರ್ಚಿಸಲಾಗಿದ್ದು ಅಂತಹ ತಾತ್ವಿಕ ಪರ್ಯಾಯಗಳು ಹೇಗೆ ವಲಸೆಯ ಚರಿತ್ರೆ ಮತ್ತು ಚರ್ಚೆಗಳಿಗೆ ವಿಭಿನ್ನ ಆಯಾಮಗಳನ್ನು ಕಲ್ಪಿಸಬಹುದು ಎಂಬ ಚಿಂತನೆಯನ್ನು ಈ ಲೇಖನದಲ್ಲಿ ನಡೆಸಲಾಗಿದೆ.

**ವಲಸಿತ ಮಹಿಳೆಯರ (ಅ)ದೃಶ್ಯತೆ: ವಲಸೆಯ ಕಥನಗಳಿಗೆ ಸ್ತ್ರೀವಾದೀ ತಾತ್ವಿಕ ಸವಾಲು**

೧೯೬೦ ಮತ್ತು ೭೦ರ ದಶಕಗಳಲ್ಲಿ ಜಾಗತಿಕ ಮಟ್ಟದಲ್ಲಿ ನಡೆದ ಮಹಿಳಾ ಚಳುವಳಿಗಳು ವಲಸೆಯ

ಕಥನಗಳಲ್ಲಿ ಮಹಿಳೆಯರ ಅದೃಶ್ಯತೆಯ ಕುರಿತು ಗಂಭೀರ ಆತಂಕವನ್ನು ವ್ಯಕ್ತಪಡಿಸಿದವು. ಮಹಿಳೆಯನ್ನು ಕೇವಲ "ವಲಸಿಗರ ಕುಟುಂಬ" ಎಂದು ಚಿತ್ರಿಸುವ ಪ್ರಯತ್ನಗಳು ಪುರುಷಪ್ರಧಾನ ಮನೋಧೋರಣೆಯನ್ನು ಎತ್ತಿಹಿಡಿಯುತ್ತವೆ ಮಾತ್ರವಲ್ಲದೆ, ಅವು ಮಹಿಳೆಯನ್ನು ವಲಸೆಯ ಕಥನಗಳಂತ ಬಹುತೇಕ ಅದೃಶ್ಯಳನ್ನಾಗಿಸುತ್ತವೆ ಎಂಬ ವಾದ ಮುನ್ನೆಲೆಗೆ ಬಂದಿತು. ಇದರ ಫಲವಾಗಿಯೇ ೧೯೮೦ರ ದಶಕಗಳಲ್ಲಿ ನಡೆದ ಹಲವು ಸಂಶೋಧನೆಗಳು ವಲಸೆಯ ಕಥನಗಳಲ್ಲಿ ಮಹಿಳೆಯರ ಬದುಕನ್ನು ದಾಖಲಿಸುವ ಮತ್ತು ಮುನ್ನೆಲೆಗೆ ತರುವ ಪ್ರಯತ್ನವನ್ನು ಮಾಡಿದವು (ಬಾಯ್ಡ್ ಮತ್ತು ಗ್ರೀಕೋ ೨೦೦೩). ಬಹು ಪ್ರಾಮುಖ್ಯವಾಗಿ ೮೦ರ ದಶಕದಲ್ಲಿ ಪ್ರಕಟಗೊಂಡ *ಇಂಟರ್ನ್ಯಾಷನಲ್ ಮೈಗ್ರೇಷನ್ ರಿವೀವ್* (೧೯೮೪) ನಿಯತಕಾಲಿಕೆಯು ವಲಸೆಯ ಕುರಿತ ಸ್ತ್ರೀವಾದೀ ಚಿಂತನೆಗಳಿಗೆ ಒಂದು ಮೈಲುಗಲ್ಲಾಗಿ ಪರಿಣಮಿಸಿದ್ದನ್ನು ಗಮನಿಸುವುದು ಅಗತ್ಯ. ಈ ಹಿನ್ನೆಲೆಯಲ್ಲಿ ಕೇರಳದಿಂದ ನರಸಿಂಹರಾಜಪುರಕ್ಕೆ ನಡೆದ ವಲಸೆಯ ಕಥನಗಳನ್ನು ಮರುದೃಷ್ಟಿಸುವ ಅಗತ್ಯವಿದೆ.

ಕೇರಳದ ವಿವಿಧ ಭಾಗಗಳಿಂದ ಕರ್ನಾಟಕದ ಚಿಕ್ಕಮಗಳೂರು ಜಿಲ್ಲೆಯ ನರಸಿಂಹರಾಜಪುರ ತಾಲ್ಲೂಕಿಗೆ ನಡೆದ ವಲಸೆಯ ಕುರಿತಾಗಲೀ, ವಲಸಿತ ಮಹಿಳೆಯರ ಬದುಕಿನ ಕುರಿತಾಗಲೀ ಈವರೆಗೆ ಯಾವುದೇ ಸುದೀರ್ಘವಾದ ಮತ್ತು ಸವಿಸ್ತಾರವಾದ ಅಧ್ಯಯನಗಳು ನಡೆಯದೇ ಇದ್ದು ಈ ಕುರಿತು ಹೆಚ್ಚಿನ ದಾಖಲೆಗಳು ಲಭ್ಯವಾಗಿಲ್ಲ. ಆದ್ದರಿಂದ ವಲಸಿತರ ಬದುಕಿನ ಕುರಿತು, ಅದರಲ್ಲೂ ಪ್ರಾಮುಖ್ಯವಾಗಿ ವಲಸಿತ ಮಹಿಳೆಯರ ಬದುಕಿನ ಕುರಿತು ಅಧ್ಯಯನ ನಡೆಸುವುದು ತೀರಾ ಅಗತ್ಯ. ಬಿಜು ಪಂಕಜ್‌ರವರ ಲೇಖನ ಮತ್ತು ಸಾಕ್ಷ್ಯಚಿತ್ರ ವಲಸೆಯ ಚರಿತ್ರೆಯನ್ನು ತಿಳಿದುಕೊಳ್ಳುವಲ್ಲಿ ಅಗತ್ಯ ಮಾಹಿತಿಯನ್ನು ಒದಗಿಸುತ್ತದೆಯಾದರೂ, ಅದೊಂದು ಪುರುಷಕೇಂದ್ರಿತ ದಾಖಲೆ ಎಂಬುದನ್ನು ಅಲ್ಲಗಳೆಯುವಂತಿಲ್ಲ. ಉದಾಹರಣೆಗೆ ಬಿಜು ಪಂಕಜ್‌ರವರು ೧೯೩೦ರಲ್ಲಿ ಕೇರಳದ ಅಂಗಮಾಲಿಯಿಂದ ಮನೆಬಿಟ್ಟು ಬಂದ ವರ್ಗೀಸ್ ಎಂಬವರನ್ನು ಮೊದಲ ವಲಸಿಗ ಎಂದು ಗುರುತಿಸಿ, ನಂತರ ಅವರು ಕರೆತಂದ ವಲಸಿಗ ಪುರುಷರ ಕುರಿತಷ್ಟೇ ದಾಖಲಿಸುತ್ತಾ ಹೋಗುತ್ತಾರೆ (ಪಂಕಜ್ ೨೦೨೨). ತಮ್ಮ ಸಾಕ್ಷ್ಯಚಿತ್ರದಲ್ಲಿಯೂ ವಲಸಿತ ಪುರುಷರನ್ನಷ್ಟೇ ಸಂದರ್ಶಿಸುವ ಮೂಲಕ ವಲಸೆಯನ್ನು ಒಂದು ಪುರಷಪ್ರಧಾನ ಕಥನವನ್ನಾಗಿಸುತ್ತಾರೆ. ಇದು ವಲಸಿತ ಮಹಿಳೆಯನ್ನು ವಲಸೆಯ ಚರಿತ್ರೆಯಿಂದ ಮತ್ತು ಕಥನಗಳಿಂದ ಅದೃಶ್ಯಳನ್ನಾಗಿಸುವುದು ಮಾತ್ರವಲ್ಲದೆ, ವಲಸೆಯ ಅಪೂರ್ಣ ಚಿತ್ರಣವನ್ನು ನೀಡುತ್ತದೆ. ಆದ್ದರಿಂದ ವಲಸೆಯ ಇಂಥಾ ಪ್ರಭಾವಶಾಲೀ ಕಥನಗಳನ್ನು ಮರುವ್ಯಾಖ್ಯಾನಿಸುವ ಅಗತ್ಯವಿದೆ.

## ಸ್ತ್ರೀವಾದ ಮತ್ತು ವಲಸಿತ ಮಹಿಳೆಯರ ಬದುಕಿನ ಸಂಕಥನಗಳು

ಡೆಲಯೆಟ್ ಮತ್ತು ಕೆಲ್ಸನ್ ಎಂಬವರು ತಮ್ಮ "ಜೆಂಡರ್ ಅಂಡ್ ಇಮಿಗ್ರೇಷನ್" ಎಂಬ ಪುಸ್ತಕದಲ್ಲಿ ವಲಸೆಯ ಕಥನ (ನರೇಟೀವ್) ಮತ್ತು ಸಂಕಥನ(ಡಿಸ್ಕೋರ್ಸ್)ಗಳು ಹೇಗೆ ಮಹಿಳೆಯನ್ನು ಪುರುಷಾವಲಂಬಿತ ವಲಸಿಗಳನ್ನಾಗಿ ಚಿತ್ರಿಸಿವೆ ಹಾಗೂ ಮಹಿಳೆಯ ಸ್ವತಂತ್ರ ಅಸ್ಮಿತೆಯನ್ನು ಅಲ್ಲಗಳೆಯುತ್ತವೆ ಎಂಬುದನ್ನು ಬಹಳ ಸವಿಸ್ತಾರವಾಗಿ ಚರ್ಚಿಸಿದ್ದಾರೆ (ಡೆಲಯೆಟ್ & ಕೆಲ್ಸನ್ ೧೯೯೯, ೧–೧೭.). ಇಂತಹ ವಲಸೆಯ ಕಥನಗಳು ಮತ್ತು ಸಂಕಥನಗಳು ಆ ಮೂಲಕ ವಲಸೆಯ ಅನುಭವಗಳನ್ನು ಒಂದು ಪುರುಷಕೇಂದ್ರಿತ ಚೌಕಟ್ಟಿನಲ್ಲಿ ಬಂದಿಸಿಡುತ್ತವೆ. ವಲಸೆಯ ಬಹುತೇಕ ಅಧ್ಯಯನಗಳು ವಲಸೆಯ ಕಥನಗಳಲ್ಲಿ ಸ್ತ್ರೀಯನ್ನು ವಲಸಿಗ ಪುರುಷನೊಂದಿಗಿನ ಸಂಬಂಧದಲ್ಲಿಯೇ ಅರ್ಥೈಸುವ ಪ್ರಯತ್ನ ಮಾಡುತ್ತವೆ. ಆದರೆ ಎಲೆಯೊನೋರ್ ಕೋಫ್ಮನ್‌ರು ಅಭಿಪ್ರಾಯಪಡುವಂತೆ "ವಲಸೆಯು ಒಂದು ಸಂಕೀರ್ಣ ಪ್ರಕ್ರಿಯೆಯಾಗಿದ್ದು ಪುರುಷ ಮತ್ತು ಸ್ತ್ರೀಯರ ಮೇಲೆ ಅದು ವಿಭಿನ್ನವಾದ ಪ್ರಭಾವ ಮತ್ತು ಪರಿಣಾಮವನ್ನು ಬೀರುತ್ತದೆ" (ಎಲೆಯೊನೋರ್ ಕೋಫ್ಮನ್ ೨೦೦೦, ೪೭). ಆದ್ದರಿಂದ ಸ್ತ್ರೀಯರ ವಲಸೆಯ ಅನುಭವಗಳನ್ನು ಪುರುಷ ಅನುಭವಗಳ ಚೌಕಟ್ಟಿನಿಂದ ಹೊರಗಿಟ್ಟು ಮತ್ತು ಅಷ್ಟೇ ಭಿನ್ನವಾಗಿ ಅವಲೋಕಿಸುವುದು ಅಗತ್ಯ.

ಸ್ತ್ರೀಪ್ರಧಾನ ದೃಷ್ಟಿಕೋನಗಳು ವಲಸೆಯ ಪುರುಷಕೇಂದ್ರಿತ ಕಥನಗಳನ್ನು ಅಲುಗಾಡಿಸುವುದು ಮಾತ್ರವಲ್ಲದೆ ವಲಸೆಯ ಸಂಕಥನಗಳಿಗೆ ಸ್ತ್ರೀವಾದೀ ಆಯಾಮಗಳನ್ನು ಒದಗಿಸುವ ಅನಿವಾರ್ಯತೆ ಮತ್ತು ಅಗತ್ಯತೆಗಳನ್ನು ಸಾರಿಹೇಳುತ್ತವೆ. ಅಂಥಹ ಸ್ತ್ರೀವಾದೀ ಚಿಂತನೆಗಳು ವಲಸೆಯ ಸಂದರ್ಭದಲ್ಲಿ ಮಹಿಳೆಯರು ಪ್ರತ್ಯೇಕವಾಗಿ ಎದುರಿಸುವ ಸಮಸ್ಯೆಗಳು, ಅವುಗಳನ್ನು ಎದುರಿಸುವಲ್ಲಿ ಅವರು ಕಟ್ಟಿಕೊಳ್ಳುವ ವಿವಿಧ ಕಾರ್ಯತಂತ್ರಗಳು, ಅವುಗಳ ಸಂಕೀರ್ಣತೆಗಳು ಇವೆಲ್ಲವನ್ನೂ ದಾಖಲೆಸಮೇತ ಚರ್ಚಿಸುವ ಅಗತ್ಯ ಮತ್ತು ಅದರ ಪ್ರಾಮುಖ್ಯತೆಯನ್ನು ಎತ್ತಿ ಹಿಡಿಯುತ್ತವೆ. ರೆಹಮಾನ್ ಎಂಬವರು ಅಭಿಪ್ರಾಯ ಪಡುವಂತೆ ಸ್ತ್ರೀವಾದೀ ದೃಷ್ಟಿಕೋನಗಳು ವಲಸೆಯ ಸಂದರ್ಭದಲ್ಲಿ ಮಹಿಳೆಯ ಪಾತ್ರವನ್ನು ಅರಿತುಕೊಳ್ಳುವಲ್ಲಿ ಮತ್ತು ದಾಖಲಿಸುವಲ್ಲಿ ಮಾತ್ರ ಸಹಕಾರಿಯಾಗಿರದೆ, ವಲಸೆಯ ಸಂದರ್ಭದಲ್ಲಿ ಮಹಿಳೆಯನ್ನು ಅಬಲೆಯನ್ನಾಗಿ ಚಿತ್ರಿಸುವ ಸಂಕಥನಗಳನ್ನು ಪ್ರಶ್ನಿಸುವ ಹಾಗೂ ಪರ್ಯಾಯ ಸಂಕಥನಗಳನ್ನು ಕಟ್ಟಿಕೊಡುವ ಕಾರ್ಯವನ್ನು ಮಾಡುತ್ತವೆ (ರೆಹಮಾನ್ ೨೦೧೩, ೧೬೩–೧೬೫).

ಕೇರಳದಿಂದ ಕರ್ನಾಟಕದ ವಿವಿಧ ಭಾಗಗಳಿಗೆ ವಲಸೆ ಬಂದ ಕೇರಳಿಗರ ವಲಸೆಯ ಕಥನಗಳು ಮತ್ತು ಅದರ ಸುತ್ತಲೂ ನಡೆದ ಸಂಕಥನಗಳು ಮಹಿಳೆಯನ್ನು ಅಬಲೆಯಾಗಿ ಮತ್ತು ಪರುಷಾವಲಂಭಿಯಾಗಿ ಚಿತ್ರಿಸಿರುವುದು ಈ ಮೇಲೆ ಉದಾಹರಿಸಿದ ಲೇಖನ ಮತ್ತು ಸಾಕ್ಷ್ಯಚಿತ್ರಗಳಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಬಿಜು ಪಂಕಜ್‌ರವರು ತಮ್ಮ ಲೇಖನದಲ್ಲಿ ಹೀಗೆ ಅಭಿಪ್ರಾಯಪಡುತ್ತಾರೆ: "ವರ್ಗೀಸರಿಗೆ ಚಿಕ್ಕಮಗಳೂರಿನತ್ತ ವಲಸೆ ಬರುವ ಅವರ ತೀರ್ಮಾನ ಅವರ ಬದುಕಿನ ತೀರ್ಮಾನವಾಗಿತ್ತು. ಇಂದು ಈ ಪ್ರಾಂತ್ಯದಲ್ಲಿ ಅವರ ಕುಟುಂಬ ಅತ್ಯಂತ ಯಶಸ್ವೀ ಮತ್ತು ಸಮೃದ್ಧ ಕುಟುಂಬ" (ಪಂಕಜ್ ೨೦೨೨). ಇಲ್ಲಿ ಗಮನಾರ್ಹ ಮತ್ತು ಅಚ್ಚರಿಯ ವಿಷಯವೆಂದರೆ, ಇಡೀ ವಲಸೆಯ ಕಥನವನ್ನು ವರ್ಗೀಸರ ಬದುಕಿನ ಯಶೋಗಾಥೆಯಾಗಿ ಚಿತ್ರಿಸಿರುವುದು. ಈ ಯಶಸ್ಸಿನ ಹಿಂದೆ ಅದೆಷ್ಟೋ ಮಹಿಳೆಯರು ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ತಮ್ಮ ಕೊಡುಗೆಗಳನ್ನು ನೀಡಿರಬಹುದು ಎಂಬ ಊಹೆಗೂ ಈ ಕಥನ ಅವಕಾಶ ಮಾಡಿಕೊಡುವುದಿಲ್ಲ. ವಿಪರ್ಯಾಸವೆಂದರೆ ಪಂಕಜ್‌ರವರ ಅಭಿಪ್ರಾಯವೇ ಜನಸಾಮಾನ್ಯರ ಬಾಯ್ದೆರೆಯ ಕಥನಗಳಲ್ಲಿಯೂ ಕಂಡುಬರುವುದು. ಆದ್ದರಿಂದಲೇ ಈ ಕಥನಗಳನ್ನು ಸ್ತ್ರೀವಾದೀ ದೃಷ್ಟಿಕೋನದಿಂದ ವಿಮರ್ಶೆಗೆ ಒಳಪಡಿಸಬೇಕಾದದ್ದು ತೀರಾ ಅಗತ್ಯ ಮತ್ತು ಅನಿವಾರ್ಯ ಕೂಡಾ.

## ವಲಸಿತ ಮಹಿಳೆಯರ ಬದುಕಿನ ಬಹುರೂಪೀ ಮತ್ತು ಬಹುಮುಖೀ ಚಿತ್ರಣ

ಸಾಮಾನ್ಯವಾಗಿ ವಲಸೆಯ ಕುರಿತ ಅಧ್ಯಯನಗಳು ವಲಸೆಯನ್ನು ಒಂದು ಸಾಮಾನ್ಯ ಮತ್ತು ಏಕರೂಪೀ (homogenous) ಕಥನ ಎಂಬಂತೆ ಚಿತ್ರಿಸುವುದಿದೆ. ಆದರೆ ಸ್ತ್ರೀಕೇಂದ್ರಿತ ವಲಸೆಯ ಅಧ್ಯಯನಗಳು ವಲಸೆಗೆ ಇರುವ ಬಹುರೂಪೀ (heterogenous) ಮುಖಗಳನ್ನು ಅನಾವರಣಗೊಳಿಸುವ ಪ್ರಯತ್ನವನ್ನು ಮಾಡುತ್ತವೆ. ಪ್ರತಿಯೊಂದು ವಲಸೆಯ ಕಥನಗಳೂ ಒಂದಲ್ಲ ಒಂದು ವಿಧದಲ್ಲಿ ವಿಭಿನ್ನ ಅನುಭವ ಮತ್ತು

ಅಭಿವ್ಯಕ್ತಿಯನ್ನು ಹೊಂದಿದೆ ಎಂಬ ಅರಿವು ಇಲ್ಲಿ ಬಹು ಪ್ರಾಮುಖ್ಯ. ಉದಾಹರಣೆಗೆ ವಲಸೆಯ ಸಂದರ್ಭದಲ್ಲಿ ಮಹಿಳೆಯರ ಅನುಭವಗಳು ಪುರುಷರ ಅನುಭವಗಳಿಗಿಂತ ಭಿನ್ನವಾಗಿರುತ್ತವೆ. ಅಂತೆಯೇ ಶ್ರೀಮಂತ ವರ್ಗದ ಮಹಿಳೆಯ ಅನುಭವವು ಬಡವರ್ಗದ ಮಹಿಳೆಯ ಅನುಭವಗಳಿಗಿಂತ ಭಿನ್ನವಾಗಿರುತ್ತವೆ. ಶಿಕ್ಷಿತ ಮಹಿಳೆಯ ಅನುಭವಗಳು ಅಶಿಕ್ಷಿತ ಮಹಿಳೆಯ ಅನುಭವಗಳಿಗಿಂತ ಹಲವು ಬಗೆಗಳಲ್ಲಿ ಭಿನ್ನವಾಗಿರುತ್ತವೆ. ಆದ್ದರಿಂದ ವಲಸೆಯ ಬಹುರೂಪೀ ಅನುಭವಗಳನ್ನು ಅರ್ಥಮಾಡಿಕೊಳ್ಳುವುದು ಅತ್ಯಂತ ಅಗತ್ಯ.

ಪುರುಷಪ್ರಧಾನ ವ್ಯವಸ್ಥೆಯ ಹಿನ್ನೆಲೆಯಿಂದ ವಲಸೆ ಬಂದ ವಲಸಿತ ಮಹಿಳೆಯರು ತಾವು ವಲಸೆ ಬಂದ ಸ್ಥಳದಲ್ಲಿ ಲಿಂಗಾಧಾರಿತ ತಾರತಮ್ಯವನ್ನು ಎದುರಿಸಬೇಕಾಗಿದ್ದು ಅದು ಅವರ ಶೋಷಿತ ಅಸ್ಮಿತೆಯನ್ನು ಮತ್ತೊಮ್ಮೆ ಒರೆಗೆ ಹಚ್ಚುವಂತೆ ಮಾಡುತ್ತದೆ (ಇಂದ್ರಾಣಿ ಮಜುಂದಾರ್ ಮತ್ತು ಇತರರು ೨೦೧೩, ೫೮-೬೦). ಪುರುಷಪ್ರಧಾನ ಕುಟುಂಬದಲ್ಲಿ ವಿವಿಧ ಸ್ಥರಗಳಲ್ಲಿ ಶೋಷಣೆಯ ಅನುಭವಗಳನ್ನು ಉಂಡ ಮಹಿಳೆಯರು ವಲಸೆ ಬಂದ ಸ್ಥಳದಲ್ಲಿ ಹೊಸಬದುಕಿನ ಕನಸನ್ನು ಕಟ್ಟಿಕೊಂಡರೂ ಅದು ನನಸಾಗದೇ ಪರಿತಪಿಸುವ ಅನುಭವಗಳನ್ನು ವಲಸೆಯ ಕಥನಗಳು ಹೇಳುತ್ತವೆ. ಅಷ್ಟೇ ಅಲ್ಲದೆ, ಅಮಲುವ್ಯಸನದ ಗಂಡಂದಿರಿಂದ ಕುಟುಂಬವನ್ನು ರಕ್ಷಿಸುವ ಮಹತ್ತರ ಜವಾಬ್ದಾರಿಯನ್ನೂ ಮಹಿಳೆಯರು ನಿಭಾಯಿಸಬೇಕಾಗಿದ್ದು ಅದು ಅವರ ಬಹುರೂಪೀ ಅನುಭವಕ್ಕೆ ಸಾಕ್ಷಿ. ಇನ್ನು ಉದ್ಯೋಗದ ಕ್ಷೇತ್ರದಲ್ಲಿಯೂ ವಿವಿದ ರೀತಿಯ ಶೋಷಣೆ, ಮಾನಸಿಕ ಮತ್ತು ದೈಹಿಕ ಹಿಂಸೆಯನ್ನು ವಲಸಿತ ಮಹಿಳೆಯರು ಅನುಭವಿಸುವುದನ್ನು ಹಲವು ಸಂಶೋಧನೆಗಳು ಹೊರಗೆಡಹಿವೆ. ಉದ್ಯೋಗಕ್ಕೆ ಸರಿಯಾದ ಮತ್ತು ಸಮಾನ ಕೂಲಿ ಸಿಗದೆ, ಅಲ್ಲಿಯೂ ಪುರುಷಪ್ರಧಾನ ವ್ಯವಸ್ಥೆಯ ಛಾಯೆ ಈ ಮಹಿಳೆಯರ ಬದುಕಿನ ಮೇಲೆ ಬಿದ್ದು ಅವರ ಬದುಕನ್ನು ಅಸ್ಥಿರವಾಗಿಸಿದ ಹಲವು ಕಥನಗಳ ಕುರಿತು ಇಂದ್ರಾಣಿ ಮಜುಂದಾರ್ ಮತ್ತಿತರರು ಬೆಳಕು ಚೆಲ್ಲಿದ್ದಾರೆ (ಇಂದ್ರಾಣಿ ಮಜುಂದಾರ್ ಮತ್ತು ಇತರರು ೨೦೧೩, ೫೪-೬೪). ಹೀಗೆ ವಲಸಿತ ಮಹಿಳೆ ವಿವಿಧ ಸ್ಥರಗಳಲ್ಲಿ ಮತ್ತು ವಿವಿಧ ರೀತಿಯಲ್ಲಿ ಶೋಷಣೆಯ ಅನುಭವಗಳನ್ನು ಅನುಭವಿಸಿದರೂ ಛಲಬಿಡದೆ ನಿರಂತರ ಹೋರಾಟದಲ್ಲಿ ತೊಡಗಿರುವ ನಿದರ್ಶನಗಳನ್ನೂ ಇವರ ಬರಹಗಳು ಹೊರಗೆಡಹಿವೆ.

ಹೋರಾಟದ ಬದುಕು ವಲಸಿತ ಮಹಿಳೆಯ ಬದುಕಿನ ಒಂದು ಮುಖವಾದರೆ, ಸಾಧನೆಯ ಬದುಕು ಆಕೆಯ ವಲಸೆಯ ಪಯಣದ ಇನ್ನೊಂದು ಮುಖವನ್ನು ಬಿಂಬಿಸುತ್ತದೆ. ಈ ನಿಟ್ಟಿನಲ್ಲಿ ವಲಸಿತ ಮಹಿಳೆಯರು ವಲಸಿತ ಪ್ರದೇಶದಲ್ಲಿ ಮಾಡುವ ಸಾಧನೆಗಳು ಮತ್ತು ಸಮಾಜಕ್ಕೆ, ಸಮುದಾಯಗಳಿಗೆ ಅವರು ನೀಡುವ ಕೊಡುಗೆಗಳ ದಾಖಲೀಕರಣದ ಅಗತ್ಯವಿದೆ. ವಲಸಿತ ಮಹಿಳೆಯರು ಕೃಷಿಕರಾಗಿ, ಗೃಹಿಣಿಯರಾಗಿ, ದಾದಿಯರಾಗಿ, ವೈದ್ಯೆಯರಾಗಿ, ಶಿಕ್ಷಕಿಯರಾಗಿ, ತರಬೇತುದಾರರಾಗಿ, ಸಾಮಾಜಿಕ ಕಾರ್ಯಕರ್ತೆಯರಾಗಿ ವಿವಿದ ಕ್ಷೇತ್ರಗಳಲ್ಲಿ ತಮ್ಮ ಸೇವಾಸಾಧನೆಯ ಛಾಪನ್ನು ಮೂಡಿಸಿದ್ದರೂ ಕೂಡಾ ಅದು ವಲಸೆಯ ಕಥನಗಳ ಭಾಗವಾಗದಿರುವುದು ತೀರಾ ವಿಪರ್ಯಾಸಕರ. ಆದ್ದರಿಂದ ವಲಸಿತ ಮಹಿಳೆಯ ಬಹುಮುಖೀ ಅನುಭವಗಳ ದಾಖಲೀಕರಣದ ಅನಿವಾರ್ಯತೆ ನಮ್ಮ ಮುಂದಿದೆ.

**ವಲಸೆಯ ಅನುಭವ ಮತ್ತು ಕಥನಗಳಿಗೆ ಸ್ತ್ರೀವಾದೀ ದಿಕ್ಸೂಚಿಗಳು**

ಸ್ತ್ರೀವಾದೀ ದೃಷ್ಟಿಕೋನವು ವಲಸೆಯ ಅಧ್ಯಯನಗಳಿಗೆ ಹೊಸ ಆಯಾಮಗಳನ್ನು ಒದಗಿಸುವುದು ಮಾತ್ರವಲ್ಲದೆ, ವಲಸಿತ ಮಹಿಳೆಯರ ಸಬಲೀಕರಣ ಮತ್ತು ಸ್ವಾತಂತ್ರ್ಯದ ಪರ ಹಲವು ಪರ್ಯಾಯ ದಿಕ್ಸೂಚಿಗಳನ್ನು ಒದಗಿಸುತ್ತದೆ. ಈಮೇಲೆ ತಿಳಿಸಿದಂತೆ ವಲಸೆಯ ಸಂದರ್ಭದಲ್ಲಿ ಬಹುತೇಕ ಮಹಿಳೆಯರು ಒಂದಲ್ಲ ಒಂದು ಉದ್ಯೋಗದಲ್ಲಿ ತೊಡಗಬೇಕಾದ ಅನಿವಾರ್ಯತೆಯನ್ನು ಎದುರಿಸುತ್ತಾರೆ. ಆದರೆ ತಮ್ಮ ಉದ್ಯೋಗದ ಕ್ಷೇತ್ರದಲ್ಲಿ ದೈಹಿಕ ಮತ್ತು ಮಾನಸಿಕ ಶೋಷಣೆಯ ಜೊತೆಯಲ್ಲಿಯೇ ವೇತನದಲ್ಲಿಯೂ ಲಿಂಗತಾರತಮ್ಯವನ್ನು ಎದುರಿಸುತ್ತಾರೆ. ಸ್ತ್ರೀವಾದೀ ಚಿಂತಕರು ಇದನ್ನು ಪ್ರತಿರೋಧಿಸಿ ಮಹಿಳೆಯರ ಸಮಾನವೇತನ ಮತ್ತು ಮಾನವಘನತೆಯ ಹಕ್ಕಿಗಾಗಿ ಕಾಯ್ದೆಗಳು ರೂಪುಗೊಳ್ಳಬೇಕು ಎಂಬ ಪರ್ಯಾಯ ದಿಕ್ಸೂಚಿಯನ್ನು ಪ್ರತಿಪಾದಿಸುತ್ತಾರೆ. ಆರತಿ ಪೋಕಲೆ ಮತ್ತು ಇತರರು ಪುಣೆ ನಗರದಲ್ಲಿರುವ ವಲಸಿತ ಮಹಿಳೆಯರ ಸಂದರ್ಭದಲ್ಲಿ ಮಾತನಾಡುತ್ತಾ ವಲಸಿತ ಮಹಿಳೆಯರ ಸಬಲೀಕರಣ ಮತ್ತು ಸ್ವಾತಂತ್ರ್ಯದ ಬೆಳಕಿನಲ್ಲಿ ಸರ್ಕಾರಗಳು ಸಮಾನವೇತನ ಕಾಯ್ದೆಗಳನ್ನು ರೂಪಿಸಬೇಕಾದ ಅನಿವಾರ್ಯತೆಯನ್ನು ಎತ್ತಿಹಿಡಿಯುತ್ತಾರೆ (ಆರತಿ ಪೋಕಲೆ ಮತ್ತು ಇತರರು ೨೦೨೧).

ವಲಸಿತ ಮಹಿಳೆಯರ ಆರೋಗ್ಯ ಮತ್ತು ಸಮಗ್ರ ಸ್ವಾಸ್ಥ್ಯದ ಕಡೆಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಅವರ ಸಬಲೀಕರಣ ಸಾಧ್ಯ ಎಂಬುದು ಸ್ತ್ರೀವಾದೀ ಸಂಶೋಧಕರು ಮತ್ತು ಹೋರಾಟಗಾರರು ನೀಡುವ ಮತ್ತೊಂದು ಪ್ರಬಲ ದಿಕ್ಸೂಚಿ. ದೆಹಲಿಯ ವಲಸಿತ ಕಟ್ಟಡ ಕಾರ್ಮಿಕ ಮಹಿಳೆಯರನ್ನು ಉದಾಹರಿಸುತ್ತಾ ಸಂಗೀತಾ ಭಟ್ಟಾಚಾರ್ಯ ಹಾಗೂ ಕಿಮ್ ಕೋರಿನೆಕ್‌ರವರು ವಲಸಿತ ಮಹಿಳೆಯರು ಮತ್ತು ಮಕ್ಕಳು ಪುರುಷರಿಗಿಂತ ದುಪ್ಪಟ್ಟು ಅನಾರೋಗ್ಯಕ್ಕೆ ಒಳಗಾಗುತ್ತಾರೆ ಎನ್ನುತ್ತಾರೆ (ಸಂಗೀತಾ ಕೆ. ಭಟ್ಟಾಚಾರ್ಯ ಮತ್ತು ಕಿಮ್ ಕೋರಿನೆಕ್ ೨೦೦೭, ೫೧೧-೫೩೧). ವಲಸಿತ ಪ್ರದೇಶಗಳಲ್ಲಿ ಸೂಕ್ತವಾದ ವೈದ್ಯಕೀಯ ಸೌಲಭ್ಯಗಳು ಇಲ್ಲದಿರುವುದು ಹಾಗೂ ಮಹಿಳೆಯರು ಮತ್ತು ಮಕ್ಕಳ ದುಡಿಮೆಯ ಸಂದರ್ಭಗಳು ತೀರಾ ಕಠಿಣವಾಗಿರುವುದು ಇದಕ್ಕೆ ಬಹುದೊಡ್ಡ ಕಾರಣವಾಗುತ್ತದೆ ಎಂಬುದು ಅವರ ಅಭಿಮತ. ಕೇರಳದಿಂದ ಕರ್ನಾಟಕಕ್ಕೆ ವಲಸೆ ಬಂದ ಮಹಿಳೆಯರು ಮತ್ತು ಮಕ್ಕಳ ಸಂದರ್ಭದಲ್ಲೂ ಈ ವಾದ ಸರಿ ಎನ್ನಿಸುತ್ತದೆ. ಆದ್ದರಿಂದ ವಲಸಿತ ಮಹಿಳೆಯರ ಆರೋಗ್ಯ ಮತ್ತು ಸಮಗ್ರ ಸ್ವಾಸ್ಥ್ಯದ ಕುರಿತು ಸರ್ಕಾರಗಳು ಮತ್ತು ಸರ್ಕಾರೇತರ ಸಂಘಸಂಸ್ಥೆಗಳು ಮುತುವರ್ಜಿ ವಹಿಸುವುದು ಮಾತ್ರವಲ್ಲದೆ ಅದನ್ನು ಪ್ರಾಥಮಿಕ ಆದ್ಯತೆಯನ್ನಾಗಿಸುವುದು ತೀರಾ ಅಗತ್ಯ.

ಒಟ್ಟಾರೆಯಾಗಿ ಸ್ತ್ರೀವಾದೀ ಚಿಂತನೆಗಳು ಮತ್ತು ಸಂಘಟನೆಗಳು ವಲಸಿತ ಮಹಿಳೆಯರ ಸಬಲೀಕರಣ ಮತ್ತು ಸ್ವಾತಂತ್ರ್ಯ ಸಾಧ್ಯವಾಗಬೇಕಾದರೆ ಕಾನೂನಾತ್ಮಕ ಮತ್ತು ರಚನಾತ್ಮಕ ಬದಲಾವಣೆಗಳು ಅಗತ್ಯ ಎಂಬುದನ್ನು ಒತ್ತಿ ಹೇಳುತ್ತವೆ. ವಲಸಿತ ಸ್ತ್ರೀಯರಿಗೆ ಎಲ್ಲಾ ಸಂಪನ್ಮೂಲಗಳು ಲಭ್ಯವಾಗುಂತೆ ಮಾಡುವುದು, ಮತ್ತು ಅವುಗಳ ಬಳಕೆಗೆ ದಾರಿ ಮಾಡಿಕೊಡುವುದು, ಸುರಕ್ಷಿತ ಔದ್ಯೋಗಿಕ ವಾತಾವರಣವನ್ನು ಒದಗಿಸುವುದು, ಸಮಾನವೇತನಕ್ಕೆ ಅವರನ್ನು ಭಾಜನರನ್ನಾಗಿಸುವುದು – ಇಂತಹ ರಚನಾತ್ಮಕ ಬದಲಾವಣೆಗಳನ್ನು ತರುವಲ್ಲಿ ಲಿಂಗಸಂವೇದೀ ವಲಸೆಯ ಕಾಯ್ದೆಗಳನ್ನು ಅನುಷ್ಠಾನಗೊಳಿಸುವುದು ಅತ್ಯಂತ ಅಗತ್ಯ ಎಂಬುದು ಬಹುಪ್ರಾಮುಖ್ಯ ಸ್ತ್ರೀವಾದೀ ದಿಕ್ಸೂಚಿಯಾಗಿದೆ.

**ಉಪಸಂಹಾರ**

ವಲಸೆಯ ಕಥನಗಳು, ಸಂಕಥನಗಳು, ಹಾಗೂ ಚರಿತ್ರೆಗಳು ಹೇಗೆ ಪುರುಷಕೇಂದ್ರಿತ ವೃತ್ತಾಂತಗಳಾಗಿವೆ ಮತ್ತು ಅವು ಮಹಿಳೆಯರ ಸ್ವಘನತೆಯನ್ನು ಕುಂದಿಸುವಲ್ಲಿ ಎಷ್ಟು ಪ್ರಭಾವ ಬೀರಿವೆ ಎಂಬ ಪ್ರಶ್ನೆಗಳ ಸುತ್ತ ಒಂದು ಸ್ತ್ರೀವಾದೀ ಜಿಜ್ಞಾಸೆಯನ್ನು ಕಟ್ಟಿಡುವ ಯತ್ನವನ್ನು ಈ ಲೇಖನ ಮಾಡಿದೆ. ಕೇರಳದಿಂದ ಕರ್ನಾಟಕದ

ನರಸಿಂಹರಾಜಪುರಕ್ಕೆ ನಡೆದ ವಲಸೆಯ ಕಥನಗಳನ್ನು ಉದಾಹರಣೆಯಾಗಿಸಿಕೊಂಡು, ಒಂದು ಸ್ತ್ರೀವಾದೀ ವಿಮರ್ಶೆ ಹೇಗೆ ಅಂತಹ ಕಥನಗಳನ್ನು ಸಮಸ್ಯೀಕರಿಸಬಲ್ಲದು ಮತ್ತು ಅಂತಹ ಸಮಸ್ಯೀಕರಣ ಹೇಗೆ ಹೊಸಸಾಧ್ಯತೆಗಳತ್ತ ಬೆಳಕು ಚೆಲ್ಲಬಹುದು ಎಂಬ ಸಂಕ್ಷಿಪ್ತ ಚರ್ಚೆ ಇಲ್ಲಿ ನಡೆದಿದೆ. ವಲಸೆಯ ಕ್ರಿಯೆಯಲ್ಲಿ ಮಹಿಳೆ ಪುರುಷನೊಂದಿಗೆ ಸಮಾನವಾಗಿ ಭಾಗವಹಿಸಿದರೂ ವಲಸೆಯ ಕಥನಗಳಲ್ಲಿ ಮತ್ತು ಚರಿತ್ರೆಗಳಲ್ಲಿ ಆಕೆ ಅದೃಶ್ಯಳಾಗುವುದು ಒಂದು ಗಂಭೀರ ಸಮಸ್ಯೆ. ಈ ಸಮಸ್ಯೆಯನ್ನು ಭೇದಿಸುವಲ್ಲಿ ಸ್ತ್ರೀವಾದೀ ತಾತ್ವಿಕ ನೆಲೆಗಟ್ಟಿನ ಅಗತ್ಯವಿದೆ. ಅದು ವಲಸಿತ ಮಹಿಳೆಯರ ಬಹುರೂಪೀ ಚಿತ್ರಣವನ್ನು ನೀಡುವಲ್ಲಿ ಮಾತ್ರವಲ್ಲ, ವಲಸಿತ ಮಹಿಳೆಯರ ಸಬಲೀಕರಣ, ಸ್ವಾತಂತ್ರ್ಯ, ಮತ್ತು ಸ್ವಘನತೆಯತ್ತ ಪರ್ಯಾಯ ಮಾರ್ಗಸೂಚಿಗಳನ್ನು ಒದಗಿಸುತ್ತದೆ.

## ಗ್ರಂಥಋಣ


1. ಆರತಿ ಬಿ. ಪೋಕಲೆ, ಜಯಶ್ರೀ ಎಸ್. ಗೋತಂಕರ್, ಮತ್ತು ಪ್ರಸಾದ್ ಡಿ. ಪೋರೆ, "ಲಿವಿಂಗ್ ಅಂಡ್ ವರ್ಕಿಂಗ್ ಕಂಡಿಷನ್ಸ್ ಆಫ್ ಫೀಮೇಲ್ ಡೊಮೆಸ್ಟಿಕ್ ವರ್ಕರ್ಸ್ ಇನ್ ಪುಣೆ ಸಿಟಿ," ಆನ್‌ಲೈನ್ ಪ್ರಕಟಿತ, ಡಿಸೆಂಬರ್ ೩೧, ೨೦೨೧.
2. ಇಂದ್ರಾಣಿ ಮಜುಂದಾರ್, ಎನ್. ನೀತಾ, ಮತ್ತು ಇಂದು ಅಗ್ನಿಹೋತ್ರಿ, "ಮೈಗ್ರೇಷನ್ ಅಂಡ್ ಜೆಂಡರ್ ಇನ್ ಇಂಡಿಯಾ," *ಎಕನಾಮಿಕ್ ಅಂಡ್ ಪೊಲಿಟಿಕಲ್ ವೀಕ್ಲಿ,* ವಾ.೪೮, ನಂ.೧೦, ಮಾರ್ಚ್ ೨೦೧೩: ೫೪–೬೪.
3. ಎಲಿಜಬೆತ್ ಎಮ್. ಗ್ರೀಕೋ ಮತ್ತು ಮೋನಿಕಾ ಬಾಯ್ಡ್, "ವಿಮೆನ್ ಅಂಡ್ ಮೈಗ್ರೇಷನ್: ಇನ್ಕಾರ್ಪೊರೇಟಿಂಗ್ ಇಂಟರ್ನ್ಯಾಷನಲ್ ಮೈಗ್ರೇಷನ್ ಥಿಯರಿ," *ಮೈಗ್ರೇಷನ್ ಪಾಲಿಸಿ ಇನ್ಸ್ಟಿಟ್ಯೂಟ್*, ೨೦೦೩.
4. ಎಲೆಯೊನೋರ್ ಕೋಫ್ಮನ್, "ದಿ ಇನ್ವಿಸಿಬಿಲಿಟಿ ಆಫ್ ಸ್ಕಿಲ್ಡ್ ಫೀಮೇಲ್ ಮೈಗ್ರೆಂಟ್ಸ್ ಅಂಡ್ ಜೆಂಡರ್ ರಿಲೇಷನ್ಸ್," *ಇಂಟರ್ನ್ಯಾಷನಲ್ ಜರ್ನಲ್ ಆಫ್ ಪಾಪುಲೇಷನ್ ಜಿಯಾಗ್ರಫಿ,* ವಾ.೬, ಇ.೧, ೨೦೦೦: ೪೫–೫೯.
5. ಗ್ರೆಗರಿ ಎ. ಕೆಲ್ಸನ್ ಮತ್ತು ಡೆಬ್ರಾ ಡೆಲಯಟ್, *ಜೆಂಡರ್ ಅಂಡ್ ಇಮಿಗ್ರೇಷನ್,* ಲಂಡನ್: ಮ್ಯಾಕ್ಮಿಲನ್ ಪ್ರೆಸ್, ೧೯೯೯.
6. ಬಿಜು ಪಂಕಜ್, "ನರಸಿಂಹರಾಜಪುರ: ಕರ್ನಾಟಕದಲ್ಲಿ ಒಂದು ಮಿನಿ ಕೇರಳ", *ಮಾತೃಭೂಮಿ,* ನವಂಬರ್ ೧, ೨೦೨೨.
7. ಮಿಜಾನೂರ್ ರೆಹಮಾನ್, "ಜೆಂಡರಿಂಗ್ ಮೈಗ್ರೆಂಟ್ ರೆಮಿಟೆನ್ಸಸ್," *ಇಂಟರ್ನ್ಯಾಷನಲ್ ಮೈಗ್ರೇಷನ್,* ವಾ. ೫೧, ಇ. ೧, ೨೦೧೩: ೧೫೯–೧೭೮.
8. ಸಂಗೀತಾ ಕೆ. ಭಟ್ಟಾಚಾರ್ಯ ಮತ್ತು ಕಿಮ್ ಕೋರಿನೆಕ್, "ಅಪಾರ್ಚುನಿಟೀಸ್ ಅಂಡ್ ವಲ್ನರೆಬಿಲಿಟೀಸ್ ಆಫ್ ಫೀಮೇಲ್ ಮೈಗ್ರೆಂಟ್ಸ್ ಇನ್ ಕನ್ಸ್ಟ್ರಕ್ಷನ್ ವರ್ಕ್ ಇನ್ ಇಂಡಿಯಾ," *ಏಶಿಯನ್ ಅಂಡ್ ಪೆಸಿಫಿಕ್ ಮೈಗ್ರೇಷನ್ ಜರ್ನಲ್,* ಡಿಸೆಂಬರ್, ೨೦೦೭: ೫೧೧–೫೩೧.
9. ವಿಮೆನ್ ಇನ್ ಮೈಗ್ರೇಷನ್, *ಇಂಟರ್ನ್ಯಾಷನಲ್ ಮೈಗ್ರೇಷನ್ ರಿವೀವ್,* ವಾ.೧೮, ನಂ.೪, ವಿಂಟರ್, ೧೯೮೪.